**SC No. 110/2017**
**PW-35**

## 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

ಎಸ್. ಸಿ. 110/2017

| | | |
|---|---|---|
| ಸಾಕ್ಷಿದಾರರ ಹೆಸರು | ಮಧು | ಪ್ರಮಾಣ ವಚನ ಮಾಡಿದ ದಿನಾಂಕ: 01.12.2025 |
| ತಂದೆಯ/ಗಂಡನ ಹೆಸರು | ಸೋಮಣ್ಣ | |
| ವಯಸ್ಸು | 34 ವರ್ಷ | |
| ವೃತ್ತಿ | ಕಂಟ್ರಾಕ್ಟರ್ ಕೆಲಸ | ಪ್ರಾ.ಸಾಃ 35 |
| ವಾಸ ಸ್ಥಳ | ವಿಜಯನಗರ, ಮೈಸೂರು | ಚಾ.ಸಾಃ 57 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು 2014 ರಿಂದ 2020 ರವರೆಗೆ M.S.R. Constructions ನಲ್ಲಿ ರೈಟರ್ ಆಗಿ ಕೆಲಸ ಮಾಡಿಕೊಂಡಿದ್ದೆ. ಆ Construction ಕಂಪನಿ ಎಂ.ಎಸ್. ರೇವಣ್ಣ ರವರಿಗೆ ಸೇರಿತ್ತು. ನಾನು ಮೊಬೈಲ್ ಫೋನ್ ಅನ್ನು ಉಪಯೋಗಿಸುತ್ತಿದ್ದೇನೆ. ನನ್ನ ಮೊಬೈಲ್ ಫೋನ್ ನ ನಂಬರ್ 9916856661 ಇರುತ್ತದೆ. ಸದರಿ ನಂಬರ್ ಅನ್ನು ಕಳೆದ 18 ವರ್ಷಗಳಿಂದ ಬಳಸುತ್ತಿದ್ದೇನೆ ಈಗಲೂ ಸಹ ಅದೇ ನಂಬರ್ ಅನ್ನು ಬಳಸುತ್ತಿದ್ದೇನೆ. ಪಡುವಾರಹಳ್ಳಿಯ ಆರೋಪಿ ಮಂಜೇಶ್ ನನಗೆ ಪರಿಚಯ ಇರುವುದಿಲ್ಲ. ಈ ಪ್ರಕರಣ ಆರೋಪಿತರ ಮೇಲೆ ಯಾವ ಕಾರಣಕ್ಕಾಗಿ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಪೊಲೀಸರು ನನ್ನ ಹೇಳಿಕೆ ತೆಗೆದುಕೊಂಡಿರುತ್ತಾರೆ. ಯಾವ ವಿಚಾರವಾಗಿ ನನ್ನ ಹೇಳಿಕೆ ತೆಗೆದುಕೊಂಡಿದ್ದರು ಎಂದು ಈಗ ನನಗೆ ನೆನಪಲ್ಲಿ ಇರುವುದಿಲ್ಲ. ನಾನು ಈಗ್ಗೆ 7–8 ವರ್ಷಗಳ ಹಿಂದೆ ಮೈಸೂರಿನ ನ್ಯಾಯಾಲಯಕ್ಕೆ ಹೋಗಿ ಹೇಳಿಕೆ

ಕೊಟ್ಟಿದ್ದೆ. ನಾನು ನ್ಯಾಯಾಧೀಶರ ಮುಂದೆ ಈಗ್ಗೆ 7-8 ವರ್ಷಗಳ ಹಿಂದೆ ಏನು ಹೇಳಿಕೆ ಕೊಟ್ಟಿದ್ದೆ ಎನ್ನುವ ಬಗ್ಗೆ ನನಗೆ ನೆನಪಿಲ್ಲ. ನಾನು ವಿಸಿ ಮುಖಾಂತರ ಹಾಜರುಪಡಿಸಿರುವ ಆರೋಪಿತನನ್ನು ( ಆರೋಪಿ ಮಂಜೇಶ್ ) ನನ್ನು ಈ ಹಿಂದೆ ಎಲ್ಲಿಯೂ ನೋಡಿರುವುದಿಲ್ಲ. ನಾನು ನನ್ನ ಸಹಿ ನೋಡಿದರೆ ಗುರುತಿಸುತ್ತೇನೆ. ನಾನು ಈಗ ನೋಡುತ್ತಿರುವ ಸಹಿ ನನ್ನ ಸಹಿ ಇರುತ್ತದೆ. ಸಾಕ್ಷಿದಾರರು ದಂಡ ಪ್ರಕ್ರಿಯಾ ಸಂಹಿತೆ ಕಲಂ 164 ರ ಹೇಳಿಕೆ ಮೇಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು **ನಿಪಿ-122** ಎಂದು ಸಾಕ್ಷಿದಾರರ ಸಹಿಯನ್ನು **ನಿಪಿ-122(ಎ)** ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ , ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ಜನವರಿ 2017 ಕ್ಕಿಂತ ಪೂರ್ವದಲ್ಲಿ 8-10 ತಿಂಗಳಿನಿಂದ ನನ್ನ ಫೋನ್ ನಂಬರ್ 9916856661 ಗೆ ಬಹಳಷ್ಟು ಕರೆಗಳು ಬರುತ್ತಿದ್ದವು ಎಂದರೆ ಸರಿ, ಏಕೆಂದರೆ ನಾನು construction ಕಂಪನಿಯಲ್ಲಿ ಇದ್ದುದರಿಂದ ಮತ್ತು ರೈಟರ್ ಇದ್ದುದರಿಂದ ಸಾಕಷ್ಟು ಕರೆಗಳು ಬರುತ್ತಿದ್ದವು. 8904304562 ಈ ನಂಬರ್ ರಾಜು ರವರ ಮೊಬೈಲ್ ನಂಬರ್ ಇರುತ್ತದೆ ಎಂದರೆ ಸರಿಯಲ್ಲ. ಘಟನೆ ಆಗುವ ಪೂರ್ವದಲ್ಲಿ 3-4 ವರ್ಷಗಳಿಂದ ನಾನು ಈಗ ವಿಸಿ ಮೂಲಕ ನೋಡುತ್ತಿರುವ 10 ನೇ ಆರೋಪಿ ಮಂಜೇಶ್ ನ ಪರಿಚಯ ನನಗೆ ಇತ್ತು ಎಂದರೆ ಸರಿಯಲ್ಲ. ನಾನು ಮೂಲತಃ ಪಡುವಾರಳ್ಳಿಯ ವಾಸಿ ಇದ್ದು ಅದನ್ನು ಬಿಟ್ಟು ಬಂದಿರುತ್ತೇನೆ.

ಆರೋಪಿ ಮಂಜೇಶ 2010 ನೇ ಇಸವಿಯಲ್ಲಿ ಕರಿಯಪ್ಪ ರವರ ಕೊಲೆ ಪ್ರಕರಣದಲ್ಲಿ ಜೈಲಿಗೆ ಹೋಗಿದ್ದ ಆ ಬಗ್ಗೆ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. 2015 ನೇ ಇಸವಿಯಲ್ಲಿ ಆರೋಪಿ ಮಂಜೇಶ್ ಪಡುವಾರಳ್ಳಿಯ ರಾಘವೇಂದ್ರ ಅಲಿಯಾಸ್ ಲಲ್ಲು ರವರ ಕೊಲೆ ಕೇಸಿನಲ್ಲೂ ಸಹ ಜೈಲಿಗೆ ಹೋಗಿದ್ದ ಆ ಬಗ್ಗೆ ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ನನಗೆ ಪಡುವಾರಳ್ಳಿಯ ರಾಜು ಎಂಬುವವರು ಗೊತ್ತಿರುತ್ತಾರೆ ಎಂದರೆ ಸರಿಯಲ್ಲ. ಘಟನೆಯ ಪೂರ್ವದಲ್ಲಿ 8-10 ತಿಂಗಳಿಂದ ಪಡುವಾರಳ್ಳಿಯ ರಾಜು ನನ್ನ ಮನೆಯ ಹತ್ತಿರ ಬಂದು ಮೈಸೂರು ಜೈಲಿನಲ್ಲಿರುವ ಮಂಜೇಶ, ಜೈಲಿನಿಂದ ಫೋನ್ ನಂಬರ್ 918123907706 ನಂಬರ್ ನಿಂದ ಮತ್ತು ಇತರೆ ಸಿಮ್ ನಂಬರ್ ಗಳಿಂದ ರಾಜು ರವರ ಮೊಬೈಲ್ ಸಂಖ್ಯೆ 8904304562 ಗೆ ಕರೆ ಮಾಡಿ ಊಟ ತೆಗೆದುಕೊಂಡು ಜೈಲಿಗೆ ಬಾ ಎಂದು ಹೇಳುತ್ತಿದ್ದಾನೆ. ಊಟಕ್ಕೆ ತಗಲುವ ಹಣವನ್ನು ನನ್ನ ಕಡೆಯಿಂದ ಪಡೆದುಕೊಳ್ಳಲು ತಿಳಿಸಿರುತ್ತಾನೆ ಅಂತ ಹೇಳುತ್ತಿದ್ದ ಎಂದರೆ ಸರಿಯಲ್ಲ. ಆಗ ನಾನು ಮಂಜೇಶ್ ನಿಗೆ ಹೆದರಿಕೊಂಡು 4-5 ಬಾರಿ ರಾಜುವಿನ ಮೂಲಕ ಹಣ ಕೊಟ್ಟಿದ್ದೆ ಎಂದರೆ ಸರಿಯಲ್ಲ. ದಿನಾಂಕ 10.01.2017 ರಂದು ವಿವಿ ಪುರಂ ಪೊಲೀಸರು ನನ್ನನ್ನು ಠಾಣೆಗೆ ಬರಮಾಡಿಕೊಂಡಿದ್ದರು ಎಂದರೆ ಸರಿ. ಆ ವೇಳೆಯಲ್ಲಿ ಆರೋಪಿ ಮಂಜೇಶ್ ಪೊಲೀಸರ ವಶದಲ್ಲಿ ಇದ್ದ ಎಂದರೆ ಸರಿಯಲ್ಲ. ನಾನು ಆರೋಪಿ ಮಂಜೇಶ್ ನನ್ನು ನೋಡಿ ಗುರುತಿಸಿದ್ದೆ ಎಂದರೆ ಸರಿಯಲ್ಲ. ಆರೋಪಿ ಮಂಜೇಶ್ ಮೈಸೂರಿನ ಜೈಲಿನಲ್ಲಿ ಇದ್ದಾಗ ಹಲವಾರು ಸಿಮ್ ನಂಬರ್ ಗಳ ಮೂಲಕ ನನಗೆ ಫೋನ್ ಮಾಡಿದ್ದ ಎಂದರೆ ಸರಿಯಲ್ಲ. ನಾನು ಈಗ ಓದಿ ಹೇಳಿದ **ನಿಪಿ-123** ರ ಪ್ರಕಾರ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ದಿನಾಂಕ 19.01.2017 ರಲ್ಲಿ

ಮೈಸೂರಿನ ನ್ಯಾಯಾಲಯದಲ್ಲಿ ಸ್ವ ಇಚ್ಛೆಯಿಂದ ನಿಪಿ–122 ರ ಪ್ರಕಾರ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿ ನಾನು ಪೊಲೀಸರು ಹೇಳಿ ಕೊಟ್ಟಂತೆ ಹೇಳಿದ್ದೆ. ನಾನು ನಿಪಿ–122 ರ ಹೇಳಿಕೆಯನ್ನು ನ್ಯಾಯಾಧೀಶರ ಮುಂದೆ ಸ್ವ ಇಚ್ಛೆಯಿಂದ ಹೇಳಿದ್ದೆ ಪೊಲೀಸರು ಹೇಳಿ ಕೊಟ್ಟಂತೆ ಹೇಳಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈಗಲೂ ಸಹ ಆರೋಪಿ ಮಂಜೇಶ್ ಗೆ ಹೆದರಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ :**

**ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**ಮರವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು,ಮೈಸೂರು.**